# ನಿನ್ನಂಥ ಅವಳಿಗೆ...

ಅದು ನೀನೋ ಅಲ್ಲವೋ ತಿಳಿಯದು
ನೀನೆಂದೇ ಹುಡುಕಿ ಹೊರಟೆ
ಹುಚ್ಚು ಹುಬ್ಬು, ಹುಚ್ಚು ಕಣ್ಣು, ಹುಚ್ಚು ಕಾಡಿಗೆ
ಕಿಡಿಯ ಗೆಜ್ಜೆ, ಬೆಂಕಿ ಹೆಜ್ಜೆ
ಮರಿಮಿಂಚುಗಳ ಮೈ
ಈಗಷ್ಟೆ ಅರಳಿಕೊಂಡ ಮುತ್ತುಗ ಮೂಗುತಿ

ನೀನೆಂದೇ ಬಳಿ ಸಾರಿದೆ
ನಿನ್ನದೇ ದನಿ ನಿನ್ನದೇ ಗುನುಗು
ಎದೆಯ ಗಿಚ್ಚಿ ಗಾಯ ಮಾಡಿದ್ದು
ಕಣ್ಣಿಗೆ ಕಣ್ಣು ತಾಕಿಸಿದ್ದು
ರೆಪ್ಪೆಯೊಳಗೇ ನನ್ನ ರೂಪಿಸಿದ್ದು
ನೀನಲ್ಲದೇ ಇನ್ನಾರು ಅದು?

ಅಲ್ಲವೇ ಅಲ್ಲ ಅದು ನೀನು
ಅವಳು ವಿಚಿತ್ರ ನಿಶ್ಯಬ್ದ, ಇಳಿಬಿದ್ದ ಪರದೆ
ಮರೆಗೆ ಸರಿದ ಪಾತ್ರ
ರಂಗವ ತುಂಬಿದ ಕತ್ತಲು
ನೋಡುಗ ಕರುಕಲಾದ ಒಂದು ಆಕಸ್ಮಿಕ

ಹಾಗೆ ಬಗೆದ ಮರುಕ್ಷಣ
ಚೌಕಟ್ಟು ಸುಟ್ಟು, ಚಿತ್ರ ಉರಿದುರಿದು
ನಿಗಿನಿಗಿ ಕೆಂಡ ಕರಗಿ
ನೀನು ಅವ್ವನ ಜೋಗುಳದ ಹಾಡು
ಹಾಡಿನ ಮಳೆ

● **ಡಿ.ಕೆ. ರಮೇಶ್**



ವಾಗೀಶ ಹೆಗಡೆ